ಕೊಟ್ಟರೆ ನಮ್ಮ ಮಾನ್ಯ ಮುಖ್ಯಮಂತ್ರಿಗಳಿಗೆ ನಾನು ಅಭಿನಂದನೆಗಳನ್ನು ಹೇಳಬೇಕು. ಏಕೆಂದರೆ ನಮ್ಮ ಮಾನ್ಯ ಸದಸ್ಯರಾದ ದತ್ತರವರು ಒಳ್ಳೆಯ ಅಭಿಪ್ರಾಯಗಳನ್ನು ಹೇಳಿದಾಗಲೆಲ್ಲಾ ನಿಮಗೆ ಜನತಾದಳದವರಿಗೆ ಹೇಳುವುದಕ್ಕೆ ಹಕ್ಕಿಲ್ಲವೆಂದು ಹೇಳಿದರು. ನಮ್ಮ ನೂತನ ಮುಖ್ಯಮಂತ್ರಿಗಳು ಅವರು ಮುಖ್ಯಮಂತ್ರಿಗಳಾಗಿ ಅಧಿಕಾರ ಸ್ವೀಕಾರ ಮಾಡಿರುವುದು ನಮಗೆಲ್ಲಾ ಬಹಳ ಸಂತೋಷವನ್ನು ತಂದಿದೆ. ಮತ್ತು ಅವರ ಬಗ್ಗೆ ನಮ್ಮ ನಾಯಕರು ಹೇಳಿದ ಹಾಗೆ ಅನೇಕ ಪತ್ರಿಕೆಗಳು ಅವರ ಬಗ್ಗೆ ಆಶೋತ್ತರಗಳನ್ನು ಇಟ್ಟುಕೊಂಡು ಸಾಕಷ್ಟು ಬರೆದಿರತಕ್ಕಂಥದ್ದು, ಜನಾಭಿಪ್ರಾಯ ಮೂಡಿರತಕ್ಕಂಥದ್ದು ಅದೆಲ್ಲವನ್ನೂ ನಾವು ನೋಡಿದ್ದೇವೆ. ಅವರು socialist ಆಗಿ ಅನೇಕ ವಿಚಾರವಾದಿಗಳ ಜೊತೆ ಅವರ ಸ್ನೇಹ ಇದ್ದಂಥದ್ದು, secularism ಬಗ್ಗೆ ತುಂಬ ಬದ್ಧತೆಯನ್ನು ಬೆಳೆಸಿಕೊಂಡು ಬಂದಂತಹವರು. ಈ ರಾಷ್ಟ್ರದಲ್ಲಿ ಕಾಂಗ್ರೆಸ್ ಪಕ್ಷವನ್ನು ವಿರೋಧ ಮಾಡಿ ರಾಷ್ಟ್ರಕ್ಕೆ ಎರಡನೇ ಮಹಾತ್ಮ ಗಾಂಧಿ ಎನಿಸಿಕೊಂಡ JP movements ನಿಂದ ಪ್ರಾರಂಭವಾದಂತಹ ಜನತಾ ಪಕ್ಷ ಮಾಜಿ ಪ್ರಧಾನಿಗಳಾದ ಮಾನ್ಯ ಚಂದ್ರಶೇಖರ್‌ರವರು ಇರಬಹುದು, ಮಾನ್ಯ ಮೊರಾರ್ಜಿ ದೇಸಾಯಿಯವರು ಇರಬಹುದು, ನಮ್ಮ ರಾಜ್ಯದ ಮಾನ್ಯ ದೇವೇಗೌಡರು, ಮಾನ್ಯ ಹೆಗಡೆಯವರು, ಮಾನ್ಯ ಬೊಮ್ಮಾಯಿಯವರು ಹಾಗೂ ಮಾನ್ಯ ಪಟೇಲರ ಜೊತೆಯಲ್ಲಿ ಈ ದೇಶದ ಹಾಗೂ ರಾಜ್ಯದ ಸಮಸ್ಯೆಗೆ ಮತ್ತು ಜನರ ಪರವಾದ ಸಾಮಾಜಿಕ ನ್ಯಾಯಕ್ಕೆ ಹೋರಾಟ ಮಾಡಿದಂತಹ ಹಿನ್ನೆಲೆ ಇರತಕ್ಕಂತಹ ನಾಯಕರಿಗೆ ಅದು ನಮ್ಮ ಕಡೆಯಿಂದಾಗಲಿ, ಆ ಕಡೆಯಿಂದಾಗಲಿ ಅವರಿಗೆ ಒಂದು ಅವಕಾಶ ಸಿಕ್ಕಿದ್ದು ಅತ್ಯಂತ ಸಂತೋಷದ ವಿಚಾರ. ರಾಜಕೀಯವಾಗಿ ಕೆಲವೊಮ್ಮೆ ಆಕಸ್ಮಿಕವಾಗಿ ಕೆಲವು ವ್ಯತ್ಯಾಸಗಳು ಆಗುತ್ತವೆ. ಅವು ಯಾರೂ ಹೇಳಿ ಕೇಳಿ ಆಗುವುದಿಲ್ಲ. ಅದು ಸಂದರ್ಭಗಳು. ರಾಜ್ಯಪಾಲರ ಮೂಲಕ ಅವರು ಭಾಷಣ ಮಾಡಿಸಿದಂತಹ ಕೆಲವು ವಿಚಾರಗಳು ಭ್ರಷ್ಟಾಚಾರ ನಿರ್ಮೂಲನೆ ಸ್ವಜನ ಪಕ್ಷಪಾತ ಮಾಡುವುದಿಲ್ಲ, ಎಲ್ಲರಿಗೂ ಸಮಾನವಾಗಿ ಸರ್ಕಾರದ ನೀತಿ ನಿಯಮಗಳನ್ನು ಮಾಡತಕ್ಕಂಥದ್ದು, ಸಾಮಾಜಿಕವಾದ ಕಳಕಳಿಯನ್ನು ಮತ್ತು ರೈತ ಸಮುದಾಯಕ್ಕೆ ಹೆಚ್ಚಿನ ಆದ್ಯತೆಯನ್ನು ಕೊಡುವುದು ಅನೇಕ ವಿಚಾರಗಳಲ್ಲಿ ಗುಡಿಸಲು ರಹಿತ ರಾಜ್ಯ. ಈ ತರಹದ ಅನೇಕ ವಿಚಾರಗಳನ್ನು ಅವರು ರಾಜ್ಯಪಾಲರ ಭಾಷಣದಲ್ಲಿ ಓದಿಸಿರುವುದು ನಾವು

ನೋಡಿದ್ದೇವೆ. ಅನೇಕ ರಾಜ್ಯಪಾಲರ ಭಾಷಣಗಳನ್ನು ನಮ್ಮ ನಾಯಕರಾದ ಮಾನ್ಯ ಕುಮಾರಣ್ಣರವರು ರೆಫರ್ ಮಾಡಿದರು. ಎಲ್ಲಾ ಸಂದರ್ಭಗಳಲ್ಲಿಯೂ ಸಹ ಹೊಸ ಸರ್ಕಾರಗಳು ಬಂದಾಗ ಮಾಡಿರತಕ್ಕಂತಹ ಭಾಷಣಗಳು. ಆದರೆ ನನಗೆ ಸಿದ್ದರಾಮಯ್ಯನವರ ಬಗ್ಗೆ ಇರತಕ್ಕಂಥ ವಿಶ್ವಾಸದಿಂದ ಬಹುಶಃ ಆ ತರಹ ಇದು ಒಂದು ಭಾಷಣ ಆಗಬಾರದು, ಅಚ್ಚಾಗಿರತಕ್ಕಂಥ ಭಾಷಣದಲ್ಲಿ ಕನಿಷ್ಠ 70 ರಿಂದ 80 ಪರ್ಸೆಂಟ್ ಆದರೂ ಒಳ್ಳೆಯ ಕೆಲಸಗಳಾಗಬೇಕು ಎನ್ನುವುದು ನನ್ನ ಅಭಿಪ್ರಾಯವಾಗಿದೆಯಷ್ಟೆ. ವಿಶೇಷವಾಗಿ ಜನ, ಇವತ್ತು ಮಾಧ್ಯಮಗಳು, ಎಲ್ಲರ ಅಭಿಪ್ರಾಯವೇನಿದೆ ಆ ರೀತಿ ಅವರಿಗೆ ಆ ಒಂದು ಅಧಿಕಾರ ಕಳೆದ ಮೇಲೂ ಕೂಡ ವಿಶೇಷ ಸ್ಥಾನಮಾನ ಇರುವ ರೀತಿಯಲ್ಲಿ ಆಗಬೇಕೆನ್ನುವುದು ನನ್ನ ಕಳಕಳಿ. ಬಹಳ ಮುಖ್ಯವಾಗಿ ಇವತ್ತು ವಿದ್ಯುತ್ ಸಮಸ್ಯೆ ಇದೆ. ರೈತರುಗಳಿಗೆ ನಾವೆಲ್ಲರೂ ಎಲ್ಲ ಸಂದರ್ಭಗಳಲ್ಲಿಯೂ ಸಹ ಸಹಕಾರ ಕೊಡುತ್ತೇವೆ, ಸಬ್ಸಿಡಿ ಕೊಡುತ್ತೇವೆ ಎನ್ನುವಂಥ ಹಲವಾರು ಆಶ್ವಾಸನೆಗಳನ್ನು ಕೊಡುತ್ತಾ ಬಂದಿರುವುದನ್ನು ನಾವು ನೋಡಿಕೊಂಡು ಬಂದಿದ್ದೇವೆ. ಇವತ್ತು ವಿದ್ಯುತ್ ಸಮಸ್ಯೆ ಬಗ್ಗೆ ರೈತರು ಎಷ್ಟೋ ಬಾರಿ, ಅನೇಕ ಸಂದರ್ಭಗಳಲ್ಲಿ ರೈತ ಮುಖಂಡರುಗಳ ಸಭೆ ಮಾಡಿದಾಗ, ನಿಮ್ಮ ಸರ್ಕಾರದಿಂದ ಯಾವ ಸವಲತ್ತುಗಳೂ ಬೇಡ, ಸಬ್ಸಿಡಿಯೂ ಬೇಡ, ನಮಗೆ ನೇರವಾಗಿ ಸರ್ಕಾರ ವಿದ್ಯುತ್ ಅನ್ನು ಸಪ್ಲೈ ಮಾಡಿ, ನೀರಾವರಿಯನ್ನು ಸರಿಯಾದ ರೀತಿಯಲ್ಲಿ, ವ್ಯವಸ್ಥಿತವಾದಂಥ ರೀತಿಯಲ್ಲಿ ನೀರಾವರಿಗೆ ಹೆಚ್ಚಿನ ಒತ್ತು ಕೊಟ್ಟು, ಬೆಳೆಯತಕ್ಕಂಥ ಬೆಳೆಗೆ ಎಲ್ಲಿ ವ್ಯತ್ಯಾಸವಾಗುತ್ತದೋ ಅಲ್ಲಿ support price ಕೊಡತಕ್ಕಂಥದ್ದು, ಬಿತ್ತನೆ ಬೀಜ ಕೊಡತಕ್ಕಂಥದ್ದು, ಗೊಬ್ಬರ ಕೊಡತಕ್ಕಂಥದ್ದನ್ನು ಮಾಡಿದರೆ, ಬಹುಶಃ ಅವರಿಗೆ ನಿಮ್ಮ ಯಾವ ಸಾಲ ಮನ್ನಾವೂ ಬೇಡ, ನೀವೇನೂ free current ಕೊಡುವುದು ಬೇಡ ಎನ್ನುವುದನ್ನು ಅನೇಕ ಬಾರಿ ರೈತರುಗಳು ಚರ್ಚೆ ಮಾಡಿದ್ದಾರೆ. ಇವತ್ತು ಒಂದೊಂದು ಪಂಪ್‌ಸೆಟ್‌ನಲ್ಲಿ ಟಿ.ಸಿ. ಹೋದರೆ 5 ತಿಂಗಳು ಅವರಿಗೆ ಟಿ.ಸಿ.ಯನ್ನು replace ಮಾಡುವುದಿಲ್ಲ. ತರಕಾರಿ ಬೆಳೆಯಾದರೆ ಮೂರು ತಿಂಗಳಾಗುತ್ತದೆ, ಕಬ್ಬು ಒಂದು ವರ್ಷದ ಬೆಳೆ, ಭತ್ತದ ಬೆಳೆ ನಾಲ್ಕು ತಿಂಗಳಿಗೆ ಬರುತ್ತದೆ. ನಿಮಗೆ ಈ ಬಗ್ಗೆ ಮಾಹಿತಿ ಇಲ್ಲದಿದ್ದರೆ ಮಾನ್ಯ ಅಧ್ಯಕ್ಷರು ಮತ್ತು ಮುಖ್ಯಮಂತ್ರಿಗಳು ತರಿಸಿಕೊಳ್ಳಿ. ಕನಿಷ್ಠ ಮೂರು ತಿಂಗಳು ಕಡಿಮೆ ಯಾವ ಟಿ.ಸಿ.ಯನ್ನೂ ಕೂಡ replace ಮಾಡಿಲ್ಲ.

ರೈತರ ಒಂದು ಬೆಳೆ ಪೂರ್ಣ ನಾಶವಾದರೆ ಅವರಿಗೆ ನೀವು ಏನು ಪರಿಹಾರವನ್ನು ಕೊಡುತ್ತೀರ? ಈ ಎರಡು ವರ್ಷ ಬರದ ಹಿನ್ನೆಲೆಯಲ್ಲಿ ನಮ್ಮ ಭಾಗದಲ್ಲಿ ಈ ರೀತಿಯಾಗಿದೆ, ಇನ್ನು ಹೈದ್ರಾಬಾದ್–ಕರ್ನಾಟಕದ ಭಾಗದಲ್ಲಿ ಏನಾಗಿದೆಯೋ ನನಗೆ ಗೊತ್ತಿಲ್ಲ. ಇವತ್ತು ಈ ಭಾಗದಲ್ಲೇ ಭಯಂಕರವಾದಂಥ ರೀತಿಯಲ್ಲಿ, ಈ ಎರಡು ವರ್ಷಗಳ ಕಾಲ ಬರದ ಹಿನ್ನಲೆಯಲ್ಲಿ ರೈತರು ಸಾಕಷ್ಟು ಸಮಸ್ಯೆಯನ್ನು ಎದುರಿಸಿದ್ದಾರೆ. ಮೊನ್ನೆ ತೆಂಗಿನ ಬೆಳೆ ವಿಚಾರದಲ್ಲಿ ಚರ್ಚೆಯಾಗಿದೆ. ನನ್ನ ತಾಲ್ಲೂಕಿನಲ್ಲಿಯೇ ಅನೇಕ ಮರಗಳು ಬಿದ್ದುಹೋಗಿವೆ. ಅವುಗಳಿಗೆ ಹತ್ತು ಸಾವಿರ ರೂ.ಗಳ ಪರಿಹಾರವನ್ನು ಕೊಡಬೇಕೆಂದು ಚರ್ಚೆಯಾಗಿದೆ. ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡುವಂಥ ಸಂದರ್ಭದಲ್ಲಿ ಬಿದ್ದಿರುವ ಮರಗಳಿಗೆ ಪರಿಹಾರವನ್ನು ಕೊಡತಕ್ಕಂಥ ಕೆಲಸವನ್ನು ಮಾಡುತ್ತೇವೆಂದು ಹೇಳಬೇಕು. ಇವತ್ತು ನೀವು ಭತ್ತದ ಬೆಳೆಗೆ ಒಂದು ಕ್ವಿಂಟಾಲ್‌ಗೆ ಎರಡು ಸಾವಿರ ರೂ.ಗಳೆಂದು approximate ಆಗಿ ಬೆಲೆ ನಿಗದಿ ಮಾಡಿದರೆ, ಒಂದೂವರೆ ಸಾವಿರ ಖರ್ಚು ಬಿದ್ದರೆ ಅವನಿಗೆ ಐದು ನೂರು ರೂ.ಗಳ ಲಾಭವೆಂದು ನಿಗದಿ ಮಾಡಿದರೆ, ಕನಿಷ್ಠ ಎರಡು ಸಾವಿರ ರೂ.ಗಳಿಗಿಂತ ಬೆಲೆ ಕಡಿಮೆ ಬಂದಾಗ ಅವನಿಗೆ ಎರಡು ಸಾವಿರ ರೂ.ಗಳ ಬೆಲೆ ಕೊಡತಕ್ಕಂಥದ್ದರ ಬಗ್ಗೆ ನೀವು ಪ್ರಕಟಣೆ ಮಾಡಬೇಕು. ಎರಡು ಸಾವಿರ ರೂ.ಗಳಿಗಿಂತ ಹೆಚ್ಚಿನ ಬೆಲೆ ಮಾರುಕಟ್ಟೆಯಲ್ಲಿ ಇದ್ದಾಗ ನೀವು ಹೆಚ್ಚು ಬೆಲೆ ಕೊಡುವುದು ಬೇಡ. ಆದರೆ ನೀವು ನಿಗದಿ ಮಾಡಿದ ಬೆಲೆಗಿಂತ ಕಡಿಮೆ ಬೆಲೆಗೆ ಹೋದರೆ ಆಗ ಸರ್ಕಾರ ರೈತರ ಸಹಾಯಕ್ಕೆ ಹೋಗಬೇಕು. ಅದು ತರಕಾರಿಗಾಗಲಿ, ಕಬ್ಬು ಬೆಳೆಗಾಗಲಿ, ತೆಂಗಾಗಲಿ, ಕೊಬ್ಬರಿಯಾಗಲಿ, ಯಾವುದೇ ಬೆಳೆಗೆ ಒಂದು ನಿಗದಿತವಾದಂಥ ದರವನ್ನು, ಅವರು ಬೆಳೆಯತಕ್ಕಂಥದ್ದಕ್ಕೆ ಆಗತಕ್ಕಂಥ ಖರ್ಚು ಮತ್ತು ಅದಕ್ಕೆ ಕನಿಷ್ಠ ಲಾಭವನ್ನು ಸೇರಿಸಿ ಬೆಲೆ ನಿಗದಿ ಮಾಡಿ, ಅದಕ್ಕೆ ವ್ಯತ್ಯಾಸವಾದಾಗ ತಾವು ಅದಕ್ಕೆ ಒತ್ತು ಕೊಡತಕ್ಕಂಥ ಒಂದು ನಿರ್ಧಾರವನ್ನು ಮಾನ್ಯ ಮುಖ್ಯಮಂತ್ರಿಗಳು ಪ್ರಕಟಣೆ ಮಾಡಿದರೆ ಇದೊಂದು ಒಳ್ಳೆಯ ನಿರ್ಧಾರವಾಗುತ್ತದೆ ಎನ್ನುವುದು ನನ್ನ ಅನಿಸಿಕೆ. ಇನ್ನು ಕುಡಿಯುವ ನೀರಿನ ಸಮಸ್ಯೆ ಬಗ್ಗೆ ಈಗಾಗಲೇ ಸಾಕಷ್ಟು ಚರ್ಚೆಯಾಗಿರುವುದರಿಂದ ನಾನು ಮತ್ತೆ ಅದರ ಬಗ್ಗೆ ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ. ಸ್ವಚ್ಛ ಕುಡಿಯುವ ನೀರನ್ನು ಜನರಿಗೆ ಕೊಡತಕ್ಕಂಥ ಒಂದು ನಿರ್ಧಾರವನ್ನು ಮುಖ್ಯಮಂತ್ರಿಗಳು

ತೆಗೆದುಕೊಳ್ಳಬೇಕಾಗುತ್ತದೆ. ಆ ಒಂದು ನಿರ್ಧಾರವನ್ನು ತೆಗೆದುಕೊಳ್ಳದಿದ್ದರೆ, ಇವತ್ತು ಕೋಲಾರಕ್ಕೆ ಕೊಡುತ್ತೇವೆಂದು ಹೇಳಿದ್ದಾರೆ, ತುಮಕೂರಿಗೆ ಕೊಡುತ್ತೇವೆಂದು ಹೇಳಿದ್ದಾರೆ ಕೇವಲ ಈ ರೀತಿ ಹೇಳಿಬಿಟ್ಟರೆ ಇದು ಅಷ್ಟು ಸುಲಭವಲ್ಲ. ನಾವು ಬಹಳ ವರ್ಷಗಳಿಂದ ನೋಡಿಕೊಂಡು ಬಂದಿದ್ದೇವೆ. ನಾನು ಅವರ ಜೊತೆಯಲ್ಲಿ ಮಂತ್ರಿಯಾಗಿ ಕೆಲಸವನ್ನು ಮಾಡಿದ್ದೇನೆ. ಬಹುಶಃ ಅದು ಅಷ್ಟು ಸುಲಭದ ವಿಚಾರವಲ್ಲ. ಆದರೆ ಇದನ್ನು ಮಾಡಿ ತೋರಿಸಬೇಕು ಎನ್ನತಕ್ಕಂಥದ್ದನ್ನು ಮಾನ್ಯ ಮುಖ್ಯಮಂತ್ರಿಗಳು ಮಾಡಬೇಕು ಎಂಬುದು ನನ್ನ ವಿನಂತಿ. ಈಗ ಆಶ್ರಯ ಮನೆಗಳನ್ನು ಕಟ್ಟಲು ಒಂದೂಕಾಲು ಲಕ್ಷ ರೂಪಾಯಿಯನ್ನು ನಿಗಿದಿ ಮಾಡಲಾಗಿದೆ. ಇತ್ತೀಚಿನ ದಿನಗಳಲ್ಲಿ ಎರಡೂವರೆ ಲಕ್ಷ ರೂಪಾಯಿ ಅಂದಾಜು ನಿಗದಿ ಮಾಡಿ ಅದಕ್ಕಿಂತ ಹೆಚ್ಚು ವೆಚ್ಚ ಮಾಡತಕ್ಕಂಥವರಿಗೆ ಆಶ್ರಯ ಮನೆ ಯೋಜನೆಯಡಿಯಲ್ಲಿ ಸಹಾಯಧನ ಕೊಡುವುದಕ್ಕೆ ಬರುವುದಿಲ್ಲ. ಆದರೆ ಕೆಲವೊಮ್ಮೆ ರೈತರು ತಮ್ಮ ವ್ಯಾಪ್ತಿಯಲ್ಲಿ ಐದು ಲಕ್ಷ, ಆರು ಲಕ್ಷ ಹಣ ಕ್ರೋಢೀಕರಿಸಿ, ಸಾಲ ಮಾಡಿ ಮನೆಗಳನ್ನು ಕಟ್ಟುತ್ತಾರೆ, ನಾಲ್ಕೈದು ಜನ ಮಕ್ಕಳಿದ್ದಾಗ ಈ ರೀತಿ ಮನೆ ಕಟ್ಟುತ್ತಾರೆ. ಈಗ ಮನೆ ಕಟ್ಟಲು ಉಪಯೋಗಿಸುವ ಪದಾರ್ಥಗಳ ಬೆಲೆ ಜಾಸ್ತಿಯಾಗಿರುವುದರಿಂದ, ಇಟ್ಟಿಗೆ, ಸಿಮೆಂಟ್, ಹೀಗೆ ಎಲ್ಲದರ ಬೆಲೆ ಜಾಸ್ತಿಯಾಗಿರುವುದರಿಂದ ಎರಡು ಲಕ್ಷ ರೂ.ಗಳಲ್ಲಿ ಮನೆ ಕಟ್ಟುವುದಕ್ಕೆ ಆಗುವುದಿಲ್ಲ. ಕನಿಷ್ಠ 5 ಲಕ್ಷ ರೂ.ಗಳೊಳಗೆ ಅವರು ಮನೆ ಕಟ್ಟಿದರೂ ಸಹಾಯಧನ ಕೊಟ್ಟರೆ ತಪ್ಪೇನಲ್ಲ. ಆದರೆ ಮಧ್ಯವರ್ತಿಗಳ ಸಮಸ್ಯೆ ಮತ್ತು ಅವರ ಸುತ್ತ ಇರತಕ್ಕಂಥವರನ್ನು ತಪ್ಪಿಸಬೇಕೆಂದರೆ, ಹತ್ತು ಲಕ್ಷ ರೂ.ಗಳ ಅಥವಾ ಐದು ಲಕ್ಷ ರೂ.ಗಳನ್ನು ಖರ್ಚು ಮಾಡಿ ಕಟ್ಟುವ ಮನೆಗೆ ಸಬ್ಸಿಡಿ ಕೊಡಲು ಸರ್ಕಾರ ಪ್ರಾವಿಶನ್ ಮಾಡಿ ಸರ್ಕಾರ ಈ ಬಗ್ಗೆ ಒಂದು ಆದೇಶವನ್ನು ಹೊರಡಿಸಿದರೆ ಈ ಸಮಸ್ಯೆಯಿಂದ ಹೊರಗಡೆ ಬರಲು ಸಾಧ್ಯವಾಗುತ್ತದೆ. ಎಷ್ಟೋ ಜನರು ಇವತ್ತು ಎರಡು ಲಕ್ಷದ ಅರವತ್ತು ಸಾವಿರ ರೂ.ಗಳ ವೆಚ್ಚವಿದ್ದರೆ ಅದಕ್ಕೆ ಮೊದಲ ಪೇಮೆಂಟ್ ತೆಗೆದುಕೊಂಡಿರುತ್ತಾರೆ, ಎರಡನೇ ಪೇಮೆಂಟ್ ತೆಗೆದುಕೊಂಡಿರುತ್ತಾರೆ, ಮೂರನೇ ಪೇಮೆಂಟ್ ನಿಲ್ಲಿಸಿರುತ್ತಾರೆ. ಕೆಲವೊಮ್ಮೆ ಮೂರು ಲಕ್ಷ ರೂ.ಗಳೆಂದು ಎಸ್ಟಿಮೇಟ್ ಮಾಡಿರುತ್ತಾರೆ, ಅವರಿಗೆ ಪೇಮೆಂಟ್ ಬರುವುದಿಲ್ಲ. ಒಂದೂ ಪೇಮೆಂಟ್ ತೆಗೆದುಕೊಂಡಿರುವುದಿಲ್ಲ. ಈ ರೀತಿಯ ಅನಾಹುತಗಳನ್ನು

ತಪ್ಪಿಸುವುದಕ್ಕೆ ಒಂದು ಕಟ್ಟುನಿಟ್ಟಿನ ತೀರ್ಮಾನವನ್ನು ಮಾನ್ಯ ಮುಖ್ಯಮಂತ್ರಿಗಳು ತೆಗೆದುಕೊಳ್ಳಬೇಕು. ಗಂಗಾ ಕಲ್ಯಾಣ ಯೋಜನೆ ಬಗ್ಗೆ ನಮ್ಮ ಮಾನ್ಯ ಕಾರಜೋಳರವರು ಹೇಳಿದರು, 60 ಸಾವಿರ ರೂ.ಗಳ ದರವನ್ನು ಒಂದು ಯೂನಿಟ್‌ಗೆ ಏನು ನಿಗದಿ ಮಾಡಲಾಗಿತ್ತೋ ಅದನ್ನು ಕುಮಾರಸ್ವಾಮಿಗಳು ಮುಖ್ಯಮಂತ್ರಿಗಳಾಗಿದ್ದಾಗ 1 ಲಕ್ಷ ರೂ.ಗಳಿಗೆ ಏರಿಸಲಾಯಿತು. ಇವತ್ತು ನಾವು 1 ಲಕ್ಷ ರೂ.ಗಳಿಗೆ ಹೆಚ್ಚು ಮಾಡಿದ್ದರೂ ಕೂಡ ಈಗಲೂ ಕೂಡ ಗಂಗಾ ಕಲ್ಯಾಣ ಯೋಜನೆಯಲ್ಲಿ ಕೊಳವೆ ಬಾವಿ ಕೊರೆಸಿದರೆ ಅದಕ್ಕೆ ಪಂಪ್ ಹಾಕಿರುವುದಿಲ್ಲ, ಅದಕ್ಕೆ ಕರೆಂಟ್ ಕೊಟ್ಟಿರುವುದಿಲ್ಲ, ಈ ತರಹದ್ದು ಬಹಳಷ್ಟು ಕಡೆ ವರ್ಷಗಟ್ಟಲೆ ಈ ರಾಜ್ಯದಲ್ಲಿ ಕರೆಂಟ್ ಕನೆಕ್ಷನ್ ಕೊಡದೇ ಇರತಕ್ಕಂಥ ಕುಟುಂಬಗಳಿವೆಯೆಂದರೆ, ನಾವು ಆ ಒಂದು ಸಮುದಾಯಕ್ಕೆ ವಿಶೇಷವಾದ ಒಂದು ಅವಕಾಶ ಮಾಡಿಕೊಟ್ಟಿರುವುದರಲ್ಲಿ ಅರ್ಥವೇನಿದೆ? ಇದಕ್ಕೆ ನಾವು ಕೊಟ್ಟಂಥದ್ದು ಅವರಿಗೆ ತಲುಪಬೇಕು, ಅವರಿಗೆ ಉಪಯೋಗವಾಗಬೇಕು. ಬಹುಶಃ ಮುಂದಿನ ಮೊದಲನೆ ಕ್ಯಾಬಿನೆಟ್‌ನಲ್ಲಿಯೇ ಮಾನ್ಯ ಮುಖ್ಯಮಂತ್ರಿಗಳು ಈ ಬಗ್ಗೆ ಮಾಹಿತಿಯನ್ನು ತೆಗೆದುಕೊಂಡು ಅದನ್ನು ಪೂರ್ಣ ಪ್ರಮಾಣದಲ್ಲಿ ಅದು ಊರ್ಜಿತವಾಗುವಂಥ ರೀತಿಯಲ್ಲಿ ತೀರ್ಮಾನ ತೆಗೆದುಕೊಳ್ಳಬೇಕು. ಇದರ ಬಗ್ಗೆ ಹೆಚ್ಚು ತಿಳಿದಿರತಕ್ಕಂಥ ನಮ್ಮ ಶ್ರೀನಿವಾಸಪ್ರಸಾದ್‌ರವರು ಇರುವುದರಿಂದ ಮತ್ತು ಅವರು ಆ ಸಮುದಾಯದಿಂದ ಬಂದಿರುವುದರಿಂದ ಅವರಿಗೆ ನಮ್ಮೆಲ್ಲರಿಗಿಂತ ಹೆಚ್ಚಿಗೆ ಅನುಭವವಿದೆ, ಆ ಸಮುದಾಯದವರ ನೋವು ಗೊತ್ತಿದೆ ಎನ್ನುವುದನ್ನು ನಾನು ತಿಳಿದುಕೊಂಡಿದ್ದೇನೆ. ಆದುದರಿಂದ ಈ ಬಗ್ಗೆ ದಯಮಾಡಿ ಒಂದು ವಿಶೇಷವಾದಂಥ ತೀರ್ಮಾನವನ್ನು ಅವರು ತೆಗೆದುಕೊಳ್ಳಬೇಕು. ಇವತ್ತು ಬಹಳ ಮುಖ್ಯವಾಗಿ ಹಳ್ಳಿಗಳಲ್ಲಿ ಈ ಮಾಸಾಶನವೆಂದು ಏನು ಕೊಡುತ್ತಿದ್ದೀರಿ ಅದು OAP ಇರಬಹುದು, ಅಂಗವಿಕಲರಿಗೆ ಕೊಡುವ ಮಾಸಾಶನವಿರಬಹುದು, ಇದನ್ನು ಪಡೆಯಲು ತುಂಬಾ ಕಿರುಕುಳವಾಗುತ್ತಿದೆ ತಾಲ್ಲೂಕು ಕಛೇರಿಗಳಲ್ಲಿ. ಬ್ಯಾಂಕ್‌ನವರ ಕಾರಣ ಹೇಳುವುದು, ಅಲ್ಲಿ ಅಕೌಂಟ್ ಇಲ್ಲವೆಂದು ಹೇಳುವುದು, ಕೆಲವಕ್ಕೆ ಬ್ಯಾಂಕ್‌ನಲ್ಲಿ ದುಡ್ಡು ಬಂದಿಲ್ಲವೆಂದು ಹೇಳುವುದು, ಹೀಗೆ ಬಹಳಷ್ಟು ತೊಂದರೆಗಳಿವೆ. ಆದುದರಿಂದ ದಯಮಾಡಿ ನೇರವಾಗಿ ಅವರ ಅಕೌಂಟ್‌ಗೆ ಹೋಗುವ ಹಾಗೆ ಏಕೆ ಮಾಡಬಾರದು ಎನ್ನುವುದರ ಬಗ್ಗೆ ತಾವು ಯೋಚನೆ ಮಾಡಿ. ಈಗ

ಎಲ್ಲವೂ ಕಂಪ್ಯೂಟರೈಸ್ ಆಗಿರುವುದರಿಂದ ಅವರವರ ಅಕೌಂಟ್ ಏನಿರುತ್ತದೋ ಅವರ ಅಕೌಂಟ್‌ಗೆ ನೇರವಾಗಿ ಹಣವನ್ನು ಹಾಕಿ ಏಕೆ. ಈ ಮಧ್ಯವರ್ತಿಗಳಿಗೆ ಲಂಚ ಕೊಡುವುದು ತಪ್ಪುತ್ತದೆ. ಅವರುಗಳು ಈ ಆಫೀಸ್‌ಗಳಿಗೆ ಬಂದು ಸುತ್ತಾಡುವುದು ತಪ್ಪುತ್ತದೆ. ಪ್ರತಿ ಮೊದಲನೇ ವಾರ 1 ರಿಂದ 5 ನೇ ತಾರೀಖಿನೊಳಗೆ, 1 ರಿಂದ 10 ನೇ ತಾರೀಖಿನೊಳಗೆ ಅವರವರ ಅಕೌಂಟ್‌ಗೆ ಹಣ ಹಾಕತಕ್ಕಂಥ ಕೆಲಸವನ್ನು ಮಾಡಬೇಕು. ಈ ಹಳ್ಳಿಗಳಲ್ಲಿ ಸಾಕಷ್ಟು ಸಮಸ್ಯೆಗಳಾಗಿವೆ. ನಮ್ಮ ಮುಖ್ಯಮಂತ್ರಿಗಳಿಗೆ ಬಹುಶಃ ಆ ಸಮಸ್ಯೆಗಳ ಅರಿವಿದೆಯೆಂದು ತಿಳಿದುಕೊಂಡಿದ್ದೇನೆ. ನಾನು ಕಳೆದ ಎರಡು ತಿಂಗಳಲ್ಲಿ ಚುನಾವಣೆಯಾದ ಮೇಲೆ ಕ್ಷೇತ್ರದ ಯಾವ ಭಾಗಕ್ಕೆ ಹೋದರೂ ಈ ಮಾಸಾಶನದ ಬಗ್ಗೆ ಬಹಳ ದೂರುಗಳನ್ನು ಹೇಳುತ್ತಿದ್ದಾರೆ. ಆದಕಾರಣ ಇದರ ಬಗ್ಗೆ ನಿರ್ದಿಷ್ಟವಾಗಿ ರಾಜ್ಯ ಮಟ್ಟದ ಅಧಿಕಾರಿಗಳಿಗೆ, ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ ಸೂಚನೆ ಕೊಟ್ಟು ಇದರಲ್ಲಿ ಯಾವುದೇ ರೀತಿಯ ವ್ಯತ್ಯಾಸವಾಗದಂತೆ ಸರಿಪಡಿಸತಕ್ಕಂಥ ಒಂದು ಜವಾಬ್ದಾರಿಯನ್ನು ಕೊಡಬೇಕೆಂದು ಹೇಳಬಯಸುತ್ತೇನೆ. ಇನ್ನು ಕೆ.ಇ.ಬಿ.ಯಲ್ಲಿ ವಿದ್ಯುತ್‌ನಿಂದ ಇತ್ತೀಚೆಗೆ ಆಕಸ್ಮಿಕವಾಗಿ ವಿದ್ಯುತ್ ಸಂಪರ್ಕದಿಂದ ಅನಿವಾರ್ಯವಾಗಿ ಕೆಲವು ಸಾವು ಆಗತಕ್ಕಂಥ ಘಟನೆಗಳನ್ನು ನೋಡಿದ್ದೇವೆ. ಹಿಂದೆ ರೇವಣ್ಣನವರು ಇಂಧನ ಸಚಿವರಾಗಿದ್ದಾಗ ಒಂದು ಲಕ್ಷ ರೂ.ಗಳನ್ನು ತಕ್ಷಣ ಪರಿಹಾರವಾಗಿ ಕೊಡತಕ್ಕಂಥ ವ್ಯವಸ್ಥೆಯನ್ನು ವಿದ್ಯುತ್ ಕಂಪನಿಯಿಂದ ಮಾಡಿಸಿದ್ದರು. ಅದನ್ನು ಬಹುಶಃ ಈಗ ಹೆಚ್ಚು ಮಾಡತಕ್ಕಂಥದ್ದು ಅತ್ಯಂತ ಅವಶ್ಯಕತೆ ಇದೆ. ಮಾನ್ಯ ಮುಖ್ಯಮಂತ್ರಿಗಳು 1 ಲಕ್ಷ ರೂ.ಗಳನ್ನು 2 ಲಕ್ಷ ರೂ.ಗಳೆಂದು ಮಾಡಬೇಕು. ಇಂಥ ಅನಾಹುತಗಳಾದಾಗ ತಕ್ಷಣ ಈ ಒಂದು ವ್ಯವಸ್ಥೆಯನ್ನೇನು ಮಾಡಲಾಗಿದೆ. ಅದೇ ವ್ಯವಸ್ಥೆಯ ರೀತಿಯಲ್ಲಿ ಪೇಮೆಂಟ್ ಆಗಬೇಕು ಮತ್ತು ಒಂದು ಲಕ್ಷ ರೂ.ಗಳನ್ನು ಎರಡು ಲಕ್ಷ ರೂ.ಗಳೆಂದು ಮಾಡತಕ್ಕಂಥ ರೀತಿಯಲ್ಲಿ ಕ್ರಮವಾಗಬೇಕು. ಇನ್ನು ಜಾನುವಾರುಗಳು ಸತ್ತರೆ ಅವುಗಳಿಗೆ ಐದು ಸಾವಿರ, ಒಂದು ಸಾವಿರ, ಎರಡು ಸಾವಿರ, ಮೂರು ಸಾವಿರ ರೂ.ಗಳನ್ನು ಪರಿಹಾರವಾಗಿ ಈಗ ಕೊಡುತ್ತಿದ್ದಾರೆ. ದಯಮಾಡಿ ಆ ಮೊತ್ತವನ್ನೂ ಕೂಡ ಹೆಚ್ಚು ಮಾಡಬೇಕು. ಏಕೆಂದರೆ ಇವತ್ತು 50 ಸಾವಿರ ರೂ.ಗಳನ್ನು ಕೊಟ್ಟು ಒಂದು ಸೀಮೆಹಸುವನ್ನು ತಂದಿರುತ್ತಾನೆ, ಅಂಥವನು ಪರಿಹಾರವಾಗಿ ಐದು ಸಾವಿರ

ರೂ.ಗಳನ್ನು ತೆಗೆದುಕೊಂಡು ಹೋದರೆ ಅವನ ಕುಟುಂಬ ಮತ್ತೆ ಎಷ್ಟು ಸಮಸ್ಯೆಯನ್ನು ಎದುರಿಸಬೇಕಾಗುತ್ತದೆ ಎನ್ನುವುದನ್ನು ಯೋಚನೆ ಮಾಡಬೇಕು. ಅವರು ಏನು ಖರೀದಿ ಮಾಡಿರುತ್ತಾರೆ, ಆ ದರವನ್ನು ಆಕಸ್ಮಿಕ ಸಂದರ್ಭದಲ್ಲಿ ಆದಂತಹ ಘಟನೆಗೆ ಕೊಡತಕ್ಕಂಥ ಕೆಲಸವನ್ನು ಮಾಡಬೇಕೆಂದು ವಿನಂತಿ ಮಾಡುತ್ತೇನೆ. ಮಾನ್ಯ ಮಂತ್ರಿಗಳು ಕಳೆದ ವಾರ ಪೂರ್ತಿ ಸದನದಲ್ಲಿ ಇದ್ದರು, ಈಗ ಮೂರು ದಿವಸದಿಂದ ಇಲ್ಲ. ಮಾನ್ಯ ಮುಖ್ಯಮಂತ್ರಿಗಳು ಅದರ ಬಗ್ಗೆ ಗಮನ ಹರಿಸಬೇಕೆಂದು ಹೇಳುತ್ತೇನೆ. ಕಬ್ಬು ಸರಬರಾಜು ಮಾಡಿದಂತಹ ರೈತರ ಹಣ, ಮಂಡ್ಯ ಷುಗರ್ ಫ್ಯಾಕ್ಟರಿ, ಪಾಂಡವಪುರ ಷುಗರ್ ಫ್ಯಾಕ್ಟರಿ, ಕೊಪ್ಪ ಮತ್ತು ಕೆ.ಎಂ. ದೊಡ್ಡಿಯಲ್ಲಿ ಇರುವಂತಹ ಎಲ್ಲಾ ಷುಗರ್ ಫ್ಯಾಕ್ಟರಿಯಲ್ಲಿ ಬಾಕಿ ಇದೆ. ಮೊನ್ನೆ ಮಾನ್ಯ ಮಂತ್ರಿಗಳನ್ನು ವಿಧಾನಸೌಧದಲ್ಲಿ ಸಾರ್ವಜನಿಕರು ಭೇಟಿ ಮಾಡಿ ಕೇಳಿದಾಗ 8ನೇ ತಾರೀಖು ನಾನೇ ಜಿಲ್ಲಾ ಕೇಂದ್ರಕ್ಕೆ ಬಂದು ಕುಳಿತು ಬಗೆಹರಿಸುತ್ತೇನೆಂದು ಆಶ್ವಾಸನೆ ಕೊಟ್ಟು ಕಳುಹಿಸಿದ್ದಾರೆ. ಬಹುಶಃ ಅದು ಈಡೇರಿಲ್ಲ. ಜನರು ನಿರಾಸೆಯಿಂದ ಪ್ರತಿಭಟನೆ ಮಾಡಿದಾಗ ಜಿಲ್ಲಾಧಿಕಾರಿಗಳು ಅವರಿಗೆ ಒಂದು ವಾರ ಅವಧಿಯನ್ನು ತೆಗೆದುಕೊಂಡು ಸಮಾಧಾನ ಪಡಿಸಿದ್ದಾರೆ. ರೈತರು ಕಷ್ಟಪಟ್ಟು ಬಡ್ಡಿಗೆ ಸಾಲ ತೆಗೆದುಕೊಂಡು ಬಂದು ಕಬ್ಬನ್ನು ಬೆಳೆದು ಸರಬರಾಜು ಮಾಡಿದಾಗ, ಅದರಿಂದ ಕಾರ್ಖಾನೆಯವರು ಕಬ್ಬಿನಲ್ಲಿ ಸಕ್ಕರೆ ಮಾಡಿ, ಸಕ್ಕರೆಯನ್ನು ಮಾರಿ ಒಂದು ವರ್ಷಗಟ್ಟಲೆ ಹಣವನ್ನು ಪಾವತಿ ಮಾಡದಿದ್ದರೆ, ಸರ್ಕಾರ ಅದರ ನಿಯಂತ್ರಣವನ್ನು ಮಾಡದಿದ್ದರೆ, ಸರ್ಕಾರ ಯಾವ ರೀತಿ ರೈತರಿಗೆ support ಮಾಡುತ್ತದೆನ್ನುವ ಬಗ್ಗೆ ಯೋಚನೆ ಮಾಡಬೇಕು. ಮಂಡ್ಯ ಜಿಲ್ಲೆಯ ಕಬ್ಬು ಬೆಳೆಗಾರರ ಪೂರ್ಣ ಪ್ರಮಾಣದ ಬಾಕಿ ಏನಿದೆ, ತತ್‌ಕ್ಷಣ ಅವರಿಗೆ ಯಾವುದೇ ಬಾಕಿ ಇಲ್ಲದ ಹಾಗೆ ಒಂದು ವಾರದೊಳಗೆ ಕೊಡುವಂತಹ ಕೆಲಸವನ್ನು ಮಾಡಬೇಕು. ಮಾನ್ಯ ಮುಖ್ಯಮಂತ್ರಿಗಳು ಈ ಕಡೆ ಗಮನ ಹರಿಸಬೇಕು. ಅವರು ಹಣಕಾಸಿನ ಸಚಿವರಾಗಿದ್ದ ಸಂದರ್ಭದಲ್ಲಿ ನಾನೂ ಕೂಡ ಅವರ ಜೊತೆ ಸಚಿವನಾಗಿದ್ದೆ. ಮೈಶುಗರ್ ಕಂಪನಿಗೆ 70 ಕೋಟಿ ರೂಪಾಯಿಯವರೆಗೂ ಹಣ ಕೊಡಿಸಿ lock ಆಗಿದ್ದನ್ನು ಪ್ರಾರಂಭ ಮಾಡಿಸಿದೆವು. ಅಂದು ನಾವು Board constitute ಮಾಡದೇ, ಅಲ್ಲಿ Board chairman ಮಾಡದೇ ಒಬ್ಬ ಒಳ್ಳೆಯ ಅಧಿಕಾರಿಯನ್ನು ಹಾಕಿದಾಗ ಬಹಳ ಚೆನ್ನಾಗಿ ನಡೆದುಕೊಂಡು ಬಂತು. ಕಳೆದ

ಐದು ವರ್ಷದಲ್ಲಿ ಆಗಿರುವಂತಹ ವ್ಯತ್ಯಾಸದ ವಿಚಾರದಲ್ಲಿ ನಮ್ಮ ಜಿಲ್ಲೆಯ ಎಲ್ಲಾ ಶಾಸಕರು ಸಾಕಷ್ಟು ಬಾರಿ ತನಿಖೆಗೆ ಒತ್ತಾಯ ಮಾಡಿದರು, ಆದರೆ ಅದು ಆಗಿಲ್ಲ. ಈ ಬಾರಿ ಮಾನ್ಯ ಮುಖ್ಯಮಂತ್ರಿಗಳಿಗೆ ನೇರವಾಗಿ ಕೇಳಿಕೊಳ್ಳುವುದೇನೆಂದರೆ ಇಲ್ಲಿ ಮತ್ತು ಕೇಂದ್ರದಲ್ಲಿ ಕೂಡ ನಿಮ್ಮದೇ ಸರ್ಕಾರ ಇದೆ. ಅದನ್ನು COD ತನಿಖೆಗೆ ಕೊಟ್ಟರೂ ಒಪ್ಪಿಕೊಳ್ಳುತ್ತೇವೆ, CBI ತನಿಖೆಗೆ ಕೊಟ್ಟರೂ ಒಪ್ಪಿಕೊಳ್ಳುತ್ತೇವೆ. ಬಿಜೆಪಿ ಸ್ನೇಹಿತರಿಗೆ ನಮ್ಮ ಕಾಲದಲ್ಲಿ ನಡೆಸಿದಾಗ ಮಾತ್ರ ತನಿಖೆ ಮಾಡುತ್ತಾರೆಂದು ಏನಾದರೂ ಮುಜುಗರವಾದರೆ, ನಾವು 2004 ರಿಂದ ಪ್ರಾರಂಭ ಮಾಡಿದೆವಲ್ಲ, ಅವತ್ತಿನಿಂದ ಕೂಡ ತನಿಖೆಯಾಗಲಿ. ನಾವು ಅದಕ್ಕೂ ಬೇಡವೆಂದು ಹೇಳುವುದಿಲ್ಲ. ಇದರ ಬಗ್ಗೆ ಪೂರ್ಣ ಪ್ರಮಾಣದಲ್ಲಿ ತನಿಖೆಯಾಗಲಿ. ಒಂದು ಜಿಲ್ಲೆಯ ರೈತರಿಗೆ ಅನುಕೂಲವಾಗಲಿ ಎಂದು ನೂರೈವತ್ತು ಕೋಟಿ ರೂಪಾಯಿ ಕೊಟ್ಟರೆ, ಇವತ್ತು ಅಲ್ಲಿ ಸಾಕಷ್ಟು misuse ಆಗಿದೆ. ಇವತ್ತು ಆ ಫ್ಯಾಕ್ಟರಿ ಮುಚ್ಚುವ stageನಲ್ಲಿದೆ. ನೀವು ಇದನ್ನು COD ಗೆ ಕೊಡುತ್ತೀರೋ ಅಥವಾ CBIಗೆ ಕೊಡುತ್ತೀರೋ ಕೊಡಿ ಎಂದು ಮಾನ್ಯ ಅಧ್ಯಕ್ಷರ ಮೂಲಕ ಮಾನ್ಯ ಮುಖ್ಯಮಂತ್ರಿಗಳನ್ನು ವಿನಂತಿ ಮಾಡುತ್ತೇನೆ. ಮಂಡ್ಯ ಮತ್ತು ಪಾಂಡವಪುರ ಫ್ಯಾಕ್ಟರಿಯ ತನಿಖೆಯಾಗಬೇಕು. ತಕ್ಷಣ ಇದರ ಅವ್ಯವಹಾರ ಹೊರಗಡೆ ಬರಬೇಕು. ಮುಂದಿನ ದಿನದಲ್ಲಿ ಶಾಶ್ವತವಾಗಿ ನಡೆಯುವುದಕ್ಕೆ ಸರ್ಕಾರದ ತೀರ್ಮಾನ ಹೊರಗಡೆ ಬರಬೇಕು. ಈ ರಾಜ್ಯದಲ್ಲಿ ಸರ್ಕಾರಿ ಸಕ್ಕರೆ ಕಾರ್ಖಾನೆ ಇರುವುದು ಮೈಷುಗರ್ ಕಂಪನಿ ಒಂದೇ. ಮಂಡ್ಯ ಜಿಲ್ಲೆಯ ಜನ ಭಾವನಾತ್ಮಕವಾಗಿ ಅದನ್ನು ಬಾಗಿಲು ಹಾಕುವುದಕ್ಕೆ ಬಿಡುವುದಿಲ್ಲ. ಮಾನ್ಯ ಸಿದ್ದರಾಮಯ್ಯನವರು ಮೈಸೂರು ಜಿಲ್ಲೆಯವರಾದರೂ ಮಂಡ್ಯ ಜಿಲ್ಲೆಯ ಮೇಲೆ ಅತ್ಯಂತ ಅಭಿಮಾನ ಇರುವವರು ಎಂದು ತಿಳಿದುಕೊಂಡಿದ್ದೇನೆ. ದಯಮಾಡಿ ಈ ವಿಚಾರವನ್ನು ಅವರು ಕೈಗೆತ್ತಿಕೊಳ್ಳಬೇಕು. ಮಾನ್ಯ ರಾಜ್ಯಪಾಲರ ಭಾಷಣದ ಮೇಲೆ ಉತ್ತರ ಕೊಡುವಂತಹ ಸಂದರ್ಭದಲ್ಲಿ ನಾವು ಸರ್ಕಾರ ತನಿಖೆ ಮಾಡಿಸುವುದಕ್ಕೆ ಒಪ್ಪಿದ್ದೇವೆ ಎಂದು ಪ್ರಕಟಣೆ ಮಾಡಬೇಕು ಎನ್ನುವುದನ್ನು ವಿನಯಪೂರ್ವಕವಾಗಿ ನಾನು ಅವರಿಗೆ ವಿನಂತಿ ಮಾಡಿಕೊಳ್ಳುತ್ತೇನೆ. ಈಗ ಆ ಕಾರ್ಖಾನೆ ಪ್ರಾರಂಭವಾಗಿಲ್ಲ, ಅಲ್ಲಿ ಬಾಕಿ ಹಣ ಕೊಡಬೇಕು, ಕಾರ್ಖಾನೆ ಪ್ರಾರಂಭವಾಗಬೇಕು ಮತ್ತು ಅದರ ಬಗ್ಗೆ ತನಿಖೆಯಾಗಬೇಕು. ಇಷ್ಟೂ ಸಹ ಆಗಬೇಕೆಂದು ನಾನು ಮಾನ್ಯ

ಮುಖ್ಯಮಂತ್ರಿಗಳಿಗೆ ತಿಳಿಸುತ್ತೇನೆ. ಮತ್ತೊಂದು ಮೈಸೂರು ಮತ್ತು ಮಂಡ್ಯ ವಿಚಾರವಾಗಿ ಪತ್ರಿಕೆಯಲ್ಲಿ ಬಂದಿದೆ ತಾವು ಗಮನಿಸಿದಿರೋ ಇಲ್ಲವೋ ಗೊತ್ತಿಲ್ಲ.

ಶ್ರೀ ಕೆ.ಆರ್.ರಮೇಶ್ ಕುಮಾರ್ : ಮಾನ್ಯ ಚಲುವರಾಯಸ್ವಾಮಿಯವರೆ, ಎಲ್ಲಿಂದ ಮೈಷುಗರ್ ಫ್ಯಾಕ್ಟರಿಯ ತನಿಖೆ ಪ್ರಾರಂಭವಾಗಬೇಕು? ಒಂದು ಅಂದಾಜು ಎಲ್ಲಿಂದ ಎಂದು ಹೇಳಿ. ಏಕೆಂದರೆ ಖಂಡಸಾರಿ ಯೂನಿಟ್ ಬೇಡವೆಂದು ಹೇಳುವವರು ನಿಮ್ಮವರೆ. crushing ಆಗುತ್ತಿಲ್ಲ, cane ಉಳಿದು ಹೋಗುತ್ತಿದೆ, ಖಂಡಸಾರಿ ಯೂನಿಟ್ ಕೊಡಿ ಎಂದು ಕೇಳುವವರು ನಿಮ್ಮವರೆ. Factory expansion ಆಗಬೇಕು, ಕಬ್ಬು ಜಾಸ್ತಿ ಬರುತ್ತಿದೆ ಎಂದು ಹೇಳಿ expansion ಗೆ ದುಡ್ಡು ತೆಗೆದುಕೊಂಡವರು ನಿಮ್ಮವರೆ. Under-utilization of machinery ಎಂದು report ಕೊಡುವವರು ನಿಮ್ಮವರೆ, excess employment ಮಾಡುವವರು ನಿಮ್ಮವರೆ. ಎಲ್ಲಾ ನಿಮ್ಮವರೇ ಮಾಡಿರುವುದು. ಹಾಗಾಗಿ ಎಲ್ಲಿಂದ enquiry ಶುರುವಾಗಬೇಕು? ಏಕೆಂದರೆ ನಾನು Undertakings Committee Chairman ಆಗಿ ಒಂದು report ಕೊಟ್ಟಿದ್ದೆ. ಸುಮಾರು 13 ಜನ IAS officers ಅನ್ನು implicate ಮಾಡಿದ್ದೆವು. ಯಾರ ಮೇಲೆ ಯಾರೂ ಕೂಡ ಕ್ರಮ ತೆಗೆದುಕೊಳ್ಳಲಿಲ್ಲ. ಎಲ್ಲೋ ಒಂದು ಕಡೆ ಅಧಿಕಾರದಲ್ಲಿರುವಂತಹ ರಾಜಕೀಯ ಮುಖಂಡರುಗಳು, ಅವರಿಗೆ ತಕ್ಕಂತೆ ನರ್ತನ ಮಾಡತಕ್ಕಂಥ ನಾಚಿಕೆಗೆಟ್ಟಂತಹ ಅಧಿಕಾರಿಗಳು ಇರುವವರೆಗೂ ಈ ರೀತಿ ಮುಚ್ಚುತ್ತಿರುವುದೇ, ತೆರೆಯುತ್ತಿರುವುದೇ. ಸರ್ ಎಂ.ವಿಶ್ವೇಶ್ವರಯ್ಯನವರು ಯಾವ ಉದ್ದೇಶದಿಂದ ಇದನ್ನು ಸ್ಥಾಪನೆ ಮಾಡಿದರು, ಆ ಉದ್ದೇಶವಂತೂ ನೆರವೇರುತ್ತಿಲ್ಲ. ನಿಮಗೆ Defenceಗೆ supply ಮಾಡುವಂತಹ Rum ಒಂದು ಇಲ್ಲದಿದ್ದರೆ ಇಷ್ಟು ಉಳಿಯುತ್ತಿರಲಿಲ್ಲ. Enquiry ಎಲ್ಲಿಂದ ಪ್ರಾರಂಭವಾಗಬೇಕು? Enquiry ಎಂದು ಹೇಳಿದರೆ ಅವರು ಎಲ್ಲಿಂದ ಮಾಡಬೇಕು? ಅದರ ಬಗ್ಗೆ ನಮಗೂ ಒಂದು ಅಂದಾಜು ಸಿಗಲಿ ಎಂದು ಕೇಳಿದೆ. ನಮಗೆ ನಿಮ್ಮ ಮಂಡ್ಯ ಫ್ಯಾಕ್ಟರಿ ಜೊತೆ ಏನೂ ಸಂಬಂಧವಿಲ್ಲ. ಸರ್.ಎಂ.ವಿಶ್ವೇಶ್ವರಯ್ಯನವರನ್ನು ನಾವು ನಮ್ಮ ಕೋಲಾರದಿಂದ ನಿಮ್ಮ ಊರಿಗೆ ಕಳುಹಿಸಿರುವುದು, ಅದೊಂದೇ ಸಂಬಂಧ.

ಶ್ರೀ ಎನ್.ಚಲುವರಾಯಸ್ವಾಮಿ : ಆ ಫ್ಯಾಕ್ಟರಿ ಬಹಳ ಹಿಂದೆ ಪ್ರಾರಂಭವಾಗಿ, ಮುಚ್ಚಿತು. ಹಿಂದೆ ನೀವೆಲ್ಲ ಮಂತ್ರಿಗಳಿದ್ದಿರಿ, ನಮ್ಮ ಜಿಲ್ಲೆಯವರೇ ಮುಖ್ಯಮಂತ್ರಿಗಳಾಗಿದ್ದಾಗ ನಡೆಸುವುದು ಸಾಧ್ಯವಿಲ್ಲವೆಂದು ನಿಲ್ಲಿಸಿದರು. ನಂತರ ನಾವು 2004ರಲ್ಲಿ ಸಮ್ಮಿಶ್ರ ಸರ್ಕಾರ ಬಂದಾಗ, ಆಗ ಹಣಕಾಸಿನ ಸಚಿವರಾಗಿ ಮಾನ್ಯ ಸಿದ್ದರಾಮಯ್ಯನವರು, ಕೈಗಾರಿಕಾ ಸಚಿವರಾಗಿ ಮಾನ್ಯ ಸಿಂಧ್ಯಾರವರು ಮತ್ತು ಮಾನ್ಯ ಧರ್ಮ್ಸಿಂಗ್‌ರವರು ಇದ್ದರು. ಅವರು ಆಗುವುದಿಲ್ಲವೆಂದು ಹೇಳಿದರೂ ಕೂಡ ನಾನು ಒತ್ತಾಯ ಮಾಡಿದಾಗ, ನನ್ನ ಒತ್ತಾಯಕ್ಕೆ, ಜನರ ಮತ್ತು ಶಾಸಕರ ಒತ್ತಾಯಕ್ಕೆ ಮಣಿದು ಅದನ್ನು ಕೊಟ್ಟಿದ್ದರು. ಒಬ್ಬರು ಗರ್ಗ್ ಎನ್ನುವ ಅಧಿಕಾರಿ ತುಂಬಾ ಚೆನ್ನಾಗಿ ನಡೆಸಿದರೂ ಕೂಡ ಕಳೆದ ಐದು ವರ್ಷದಲ್ಲಿ ಅದು ಹಾಳಾಗಿದೆ. ನಮ್ಮ ಬಿಜೆಪಿ ಸರ್ಕಾರ ಇದ್ದಂತಹ ಸಂದರ್ಭದಲ್ಲಿ ಮಾಡಿದಂತಹ ಅಧ್ಯಕ್ಷರು ತುಂಬಾ ಚೆನ್ನಾಗಿ ಖಾಲಿ ಚೀಲ ಮಾರುವುದು, ಇಲ್ಲಿಂದ ದುಡ್ಡನ್ನು ತೆಗೆದುಕೊಂಡು ಹೋಗಿ ರಿಪೇರಿ ಮಾಡುವುದಕ್ಕೆ ಎಂದು ಹೇಳಿ ಹಂಚಿಕೊಳ್ಳುವುದು, contractor ಹತ್ತಿರ share ತೆಗೆದುಕೊಳ್ಳುವುದು, ಈ ರೀತಿ ನಡೆಯಬಾರದ್ದೆಲ್ಲ ನಡೆದಿದೆ. ಅದರ ಬಗ್ಗೆ details ಕೊಡಿ ಎಂದು ಹೇಳಿದರೆ ಕೊಡುತ್ತೇನೆ. ಆದರೆ ನೀವು ಈಗ ಹೆಚ್ಚಿಗೆ ಸಮಯವಿಲ್ಲವೆಂದು ಹೇಳುತ್ತಿದ್ದೀರಿ. ನನ್ನ ಸ್ನೇಹಿತರು ಬೇಜಾರು ಮಾಡಿಕೊಳ್ಳುವುದಿಲ್ಲವೆಂದು ತಿಳಿದುಕೊಂಡಿದ್ದೇನೆ. ಅವರಲ್ಲಿ ಬಹಳ ಜನರಿಗೆ ಮಾಹಿತಿ ಗೊತ್ತಿದೆ. ನಾವು ಮತ್ತು ಮಾನ್ಯ ಸಿದ್ದರಾಮಯ್ಯನವರು ಕೊಟ್ಟ ಕಾಲದಿಂದಲೂ ತನಿಖೆಯಾದರೂ ಬೇಜಾರು ಮಾಡಿಕೊಳ್ಳುವುದಿಲ್ಲವೆಂದು ಹೇಳಿದೆ. ತಾವು ತನಿಖೆಯನ್ನು 2004ರಿಂದ ಬೇಕಾದರೂ ಮಾಡಿ ಅಥವಾ 2008ರಿಂದ ಬೇಕಾದರೂ ಮಾಡಿ. ದಯಮಾಡಿ ಈ ತನಿಖೆ ಮಾಡುವಾಗ ಯಾವ ಕಾರಣಕ್ಕೂ ವ್ಯತ್ಯಾಸವಾಗಬಾರದು. ಈ ಜಿಲ್ಲೆಯ ಜನ ಹೋರಾಟಕ್ಕೆ ಇಳಿಯುವಂತಹ ಅವಕಾಶ ಮಾಡಬೇಡಿ ಎಂದು ಮಾನ್ಯ ಸಿದ್ದರಾಮಯ್ಯನವರಿಗೆ ತಮ್ಮ ಮೂಲಕ ವಿನಂತಿ ಮಾಡುತ್ತೇನೆ. ಇವತ್ತು ಮತ್ತೊಂದು ವಿಚಾರ. ಪಾಂಡವಪುರ ಸೇರಿದಂತೆ ಮೈಸೂರು, ಕೆ.ಆರ್.ನಗರ ಮತ್ತು ಕೆ.ಆರ್.ಪೇಟೆಯಲ್ಲಿ ಒಂದು ವಾರದಲ್ಲಿ ಎಂಟು ರೈತರು ಆತ್ಮಹತ್ಯೆಗೆ ಯತ್ನ ಎಂದು ಪತ್ರಿಕೆಯಲ್ಲಿ ಬಂದಿದೆ. ಅದಕ್ಕೆ ಕಾರಣ ನಕಲಿ ಬಿತ್ತನೆ ಬೀಜ ಮತ್ತು ರಸಗೊಬ್ಬರದಿಂದ ನಷ್ಟವಾದ ಕಾರಣದಿಂದ ಎಂದು ಇದೆ. ನಾವು ಮಾನ್ಯ

ಸಿದ್ದರಾಮಯ್ಯನವರ ಬಗ್ಗೆ ತುಂಬಾ ಅಭಿಮಾನವನ್ನು ಇಟ್ಟುಕೊಂಡಿದ್ದೇವೆ. ಕೇವಲ ನಾವಲ್ಲ, ಇಡೀ ರಾಜ್ಯದ ಜನರೇ ಇಟ್ಟುಕೊಂಡಿದ್ದಾರೆ. ದಯಮಾಡಿ ಇಂತಹ ಘಟನೆ ಪ್ರಾರಂಭದಲ್ಲಿ ಆಗಬಾರದು. ಮಾನ್ಯ ಯಡಿಯೂರಪ್ಪನವರು ಮುಖ್ಯಮಂತ್ರಿಯಾದಾಗ ರೈತರ ಆತ್ಮಹತ್ಯೆ ಮತ್ತು ರೈತರ ಮೇಲೆ ಗೋಲಿಬಾರ್ ಹಾವೇರಿಯಲ್ಲಿ ಪ್ರಾರಂಭವಾಯಿತು. ಈ ರೀತಿ ಆಗಬಾರದು. "ಕೆ.ಆರ್.ನಗರ ಮತ್ತು ಕೆ.ಆರ್.ಪೇಟೆಯಲ್ಲಿ ನಾಲ್ಕು-ನಾಲ್ಕು ರೈತರು ನಕಲಿ ಬಿತ್ತನೆ ಬೀಜ ಮತ್ತು ರಸಗೊಬ್ಬರದ ಸಮಸ್ಯೆಯಿಂದ ಆತ್ಮಹತ್ಯೆಗೆ ಯತ್ನ" ಎಂದು ಮೊನ್ನೆ ದಿನದ ಪತ್ರಿಕೆಯಲ್ಲಿ ಇದೆ. ಅದನ್ನು ತಕ್ಷಣ ಪರಿಹಾರ ಮಾಡಬೇಕೆಂದು ತಮ್ಮಲ್ಲಿ ವಿನಂತಿ ಮಾಡುತ್ತೇನೆ. ಇನ್ನು ಅಧಿಕಾರಿಗಳ ವಿಚಾರದಲ್ಲಿ ಮಾನ್ಯ ಸದಸ್ಯರಾದ ಬಸವರಾಜ ರಾಯರೆಡ್ಡಿಯವರು ಮಾತನಾಡಿದರು. ನಾನು ಹೆಚ್ಚು ಮಾತನಾಡುವುದಕ್ಕೆ ಹೋಗುವುದಿಲ್ಲ. ನಾನೂ ಕುಡ ಮಂತ್ರಿಯಾಗಿ ಕೆಲಸ ಮಾಡಿದಂತಹ ಸಣ್ಣ ಅನುಭವದ ಆಧಾರದ ಮೇಲೆ ಹೇಳುತ್ತೇನೆ. ಅಧಿಕಾರಿಗಳನ್ನು foreignಗೆ ಮತ್ತು ದೆಹಲಿಗೆ trainingಗೆ ಕಳುಹಿಸುತ್ತಾರೆ. RDPR Secretary, RDPR ವಿಚಾರಕ್ಕೆ training ಪಡೆದುಕೊಂಡು ಬರಬೇಕೆಂದು ಕೇಂದ್ರ ಸರ್ಕಾರಕ್ಕೆ ಹೇಳಿ ಕಳುಹಿಸುತ್ತಾರೆ. ಅವರು training ಪಡೆದುಕೊಂಡ ಬಂದ ಒಂದು ತಿಂಗಳಲ್ಲಿ ಅವರನ್ನು Housing Departmentಗೆ ಹಾಕುತ್ತಾರೆ. ಅಧಿಕಾರಿಗಳಿಗೆ ದುಡ್ಡು ಮತ್ತು ರಜಾ ಕೊಟ್ಟು ಆ ಇಲಾಖೆ ಬಗ್ಗೆ ಹೆಚ್ಚಿನ ತಿಳುವಳಿಕೆ ಪಡೆದುಕೊಂಡು ಬರುವುದಕ್ಕೆ ಕಳುಹಿಸಿ, ಅವರು training ಪಡೆದುಕೊಂಡು ಬಂದ ತಕ್ಷಣ ಅವರನ್ನು ಬದಲಾವಣೆ ಮಾಡಿದರೆ ಈ ರಾಜ್ಯದ ಜನರಿಗೆ ಏನು ಉಪಯೋಗವಾಗುತ್ತದೆ? ನನ್ನ ಅಭಿಪ್ರಾಯವೇನೆಮದರೆ ಯಾರು IAS ಅಧಿಕಾರಿಗಳಿರುತ್ತಾರೆ, ಅವರಿಗೆ ಯಾವ್ಯಾವ ಇಲಾಖೆಯಲ್ಲಿ ಅನುಭವವಿರುತ್ತದೆ, ಅವರು ಹೆಚ್ಚಿನ ವಿಚಾರವನ್ನು ಏನು ತಿಳಿದುಕೊಂಡು ಬಂದಿರುತ್ತಾರೆ, ಯಾರಿಗೆ ಆಸಕ್ತಿ ಇರುತ್ತದೆ, ಅಂತಹವರಿಗೆ training ಕೊಡಿಸಿ, ಯಾರು ಮಾಡುವುದಿಲ್ಲವೆಂದು ಹೇಳುತ್ತಾರೆ, ಅವರನ್ನು ಮನೆಗೆ ಕಳುಹಿಸಿ. ಅವರು ಇಷ್ಟ ಬಂದ ಇಲಾಖೆಯನ್ನು ಕೊಡುವುದಲ್ಲ, ಅವರಿಗೆ ಆ ಇಲಾಖೆಯನ್ನೇ ಕೊಟ್ಟಾಗ ಹೆಚ್ಚಿನ ಆಸಕ್ತಿಯಿಂದ ಕೆಲಸ ಮಾಡುತ್ತಾರೆ. ಹಿಂದೆ ನಮ್ಮ ನಾಯಕರು ಮುಖ್ಯಮಂತ್ರಿಯಾಗಿದ್ದಾಗ ಸುವರ್ಣ

ಗ್ರಾಮ ಯೋಜನೆ ನಡೆಯುತ್ತಿತ್ತು. ಇವತ್ತು ಅದು ಸ್ವಲ್ಪ ದಿಕ್ಕು ತಪ್ಪಿದೆ. ಇವತ್ತು ಶ್ರೀ ಶ್ರೀನಿವಾಸ ಮೂರ್ತಿಯವರು retire ಆಗಿ, ವಿದ್ಯುತ್ ಇಲಾಖೆಯಲ್ಲಿ KERC chairman ಆಗಿ ಕೆಲಸ ಮಾಡುತ್ತಿದ್ದಾರೆ. ಅವರು ಸಾರಿಗೆ ಇಲಾಖೆಯಲ್ಲಿ ಎಂ.ಡಿ. ಆಗಿದ್ದರು. ಅವರು ಬಂದು ನಮ್ಮ ಮುಖ್ಯಮಂತ್ರಿಯವರಿಗೆ ಸುವರ್ಣ ಗ್ರಾಮ ಯೋಜನೆಯನ್ನು ಮಾಡಬಹುದೆಂದು ಒಂದು suggestion ಕೊಟ್ಟರು. ಆಗ ಅವರಿಗೆ ಆರ್.ಡಿ.ಪಿ.ಆರ್. ಇಲಾಖೆಯ in charge ಕೊಟ್ಟೆವು. ಆಗ ಸುವರ್ಣ ಗ್ರಾಮ ಯೋಜನೆ ಪ್ರಾರಂಭವಾಯಿತು. ಆ ರೀತಿ ಅಧಿಕಾರಿಗಳಿಗೆ ಯಾವ ಇಲಾಖೆಗಳಲ್ಲಿ ಆಸಕ್ತಿ ಇರುತ್ತದೆ, ಅಂಥ ಇಲಾಖೆಯ ಜವಾಬ್ದಾರಿಯನ್ನು ಕೊಟ್ಟು, ಅವರು 5 ವರ್ಷಗಳ ಕಾಲ ಆ ಇಲಾಖೆಯಲ್ಲೇ ಪೂರ್ಣ ಪ್ರಮಾಣದಲ್ಲಿ ಕೆಲಸ ಮಾಡುವುದಕ್ಕೆ ಅವಕಾಶ ಕೊಟ್ಟು ಮಾಡಿಸಿದರೆ, ಇದರ ಉಪಯೋಗ ನಿಜಕ್ಕೂ ಆಗುತ್ತದೆ. ಇನ್ನೊಂದು ವಿಚಾರವೇನೆಂದರೆ, ಕಳಂಕಿತ ಅಧಿಕಾರಿಗಳನ್ನು ಓಡಿಸುತ್ತೇವೆಂದು ಹೇಳಿದ್ದಾರೆ, ದಯಮಾಡಿ ಆ list ಅನ್ನು ಸದನದ ಮುಂದೆ ಇಟ್ಟರೆ, ನಾವು ಸಹ ಅವರು ಯಾವ್ಯಾವ ಕಳಂಕ ಅಧಿಕಾರಿಗಳೆಂಬುದನ್ನು ನೋಡಬಹುದು. ಈಗ ಕಳಂಕ ಶಾಸಕರನ್ನು ಸ್ವಲ್ಪ ದೂರ ಇಟ್ಟಿದ್ದೇವೆಂದು ಹೇಳುತ್ತಾರೆ, ಅದೇ ರೀತಿಯಲ್ಲಿ ಅಧಿಕಾರಿಗಳನ್ನು ದೂರ ಇಡುತ್ತೀರೆಂಬ ತೀರ್ಮಾನ ಏನು ಇದೆ. ಆ list ಅನ್ನು ದಯಮಾಡಿ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನೊಂದು ಕಾವೇರಿ ವಿಚಾರವಾಗಿ ನಾನು ಹೇಳುವುದಕ್ಕೆ ಹೋಗುವುದಿಲ್ಲ. ನಮ್ಮ ನಾಯಕರು ಸುದೀರ್ಘವಾಗಿ ಹೇಳಿದ್ದಾರೆ, ಅದರ ಬಗ್ಗೆ ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ, ನಾನು ಅಭಿಪ್ರಾಯವನ್ನು ಕೊಡುವುದಕ್ಕೂ ಹೋಗುವುದಿಲ್ಲ. ಆದರೆ ಒಂದೇ ಒಂದು ಲೈನ್‌ನಲ್ಲಿ ಹೇಳುವುದಾದರೆ, ಪಾಪ ಬಹಳ ಜನರಿಗೆ ಮಾನ್ಯ ದೇವೇಗೌಡರ ಹೆಸರನ್ನು ಹೇಳಿದರೆ ಅಲರ್ಜಿ, ಅದಕ್ಕೆ ಹೇಳುವುದಕ್ಕೆ ಹೋಗುವುದಿಲ್ಲ. ಅವರಿಗೆ ಏಕೆ ನೋವು ಮಾಡುವುದು, ಬೇಜಾರು ಮಾಡುವುದು? ಮಾನ್ಯ ದೇವೇಗೌಡರು 11 ತಿಂಗಳು prime Minister ಆಗಿದ್ದರು, ಏಕೆ ಮಾಡಲಿಲ್ಲ, ಏಕೆ ಮಾಡಲಿಲ್ಲ? ವೆಂದು ಹೇಳುತ್ತಾರೆ. ಮಾನ್ಯ ದೇವೇಗೌಡರು 11 ತಿಂಗಳು prime Minister ಆಗಿದ್ದಾಗ tribunalನಲ್ಲಿ ತೀರ್ಮಾನ ಕೊಟ್ಟಿರಲಿಲ್ಲ. ಇವತ್ತು tribunalನಿಂದ ತೀರ್ಮಾನ ಹೊರಗಡೆ

ಬಂದು, ಕೇಂದ್ರ ಸರ್ಕಾರ ಮಧ್ಯೆ intervene ಆಗುವಂಥ ಅವಕಾಶವಿದ್ದು, ಸುಪ್ರೀಂ ಕೋರ್ಟ್ ಮುಂದೆ ಎರಡೂ ರಾಜ್ಯಗಳ ಸಮಸ್ಯೆಗಳ ಬಗ್ಗೆ ವರದಿ ಕೊಡುವಂಥ ಅವಕಾಶವಿತ್ತು. ಇವತ್ತು ಕೇಂದ್ರ ಸರ್ಕಾರ ಏನು ಮಾಡುತ್ತಿದೆ? ಅಲ್ಲೂ ನಿಮ್ಮ ಸರ್ಕಾರವಿದೆ, ಇಲ್ಲೂ ನಿಮ್ಮ ಸರ್ಕಾರವಿದೆ, ಮಾಡಿ ಎಂದು ಹೇಳುತ್ತಿದ್ದೇವೆ. ಕಳೆದ 5–6 ತಿಂಗಳುಗಳಲ್ಲಿ ನಡೆದಂಥ ಕೇಂದ್ರದ ಪರಿಸ್ಥಿತಿಯನ್ನು ನಾವು ಅವಲೋಕನ ಮಾಡಿ ಹೇಳುತ್ತಿದ್ದೇವೆ. ಮಾನ್ಯ ದೇವೇಗೌಡರು ಮಾತನಾಡಿದ್ದಾರೆ. ಅವರು ಪಾರ್ಲಿಮೆಂಟ್‌ನಲ್ಲಿ ಒಂದು ಗಂಟೆ ಮಾತನಾಡಿದ speech ಇದೆ, ಅವರು ಮಾತನಾಡಿ, ವಿನಂತಿ ಮಾಡಿದ್ದಾರೆ. ಅವರು ಜಗಳಕ್ಕೆ ಹೋಗಲಿಲ್ಲ. ಅವರು prime Minister ಅವರನ್ನು ಭೇಟಿ ಮಾಡಿದಾಗ ಜಗಳಕ್ಕೆ ಹೋಗಲಿಲ್ಲ. ನಾವು ಕಾಂಗ್ರೆಸ್‌ನವರ ಬಗ್ಗೆ ವಿರೋಧ ವ್ಯಕ್ತಪಡಿಸಲಿಲ್ಲ. ತಮಗೆ ಒಂದು ಅವಕಾಶವಿದೆ, ಮಾನ್ಯ ಸಿದ್ದರಾಮಯ್ಯನವರು ಕಾವೇರಿ ಅಚ್ಚುಕಟ್ಟು ಪ್ರದೇಶದಲ್ಲಿರುವವರು, ಕೇಂದ್ರದಲ್ಲೂ ಇಲ್ಲೂ ಎರಡೂ ಕಡೆಗಳಲ್ಲೂ ಕಾಂಗ್ರೆಸ್ ಸರ್ಕಾರವೇ ಇದೆ. ಹಾಗಾಗಿ ಏನಾದರೂ little bit ಸಹಾಯ ಮಾಡುವುದಕ್ಕೆ ಆಗುತ್ತದಾ? ಇದರ ಬಗ್ಗೆ ನೋಡಬೇಕು. ಇದರ ಜೊತೆಗೆ ಬಹಳ ಮುಖ್ಯವಾಗಿ ಕುಮಾರಿ ಜಯಲಲಿತಾರವರನ್ನು ಕರೆದು ಬಿಡಿ, CRA ಇರಬಹುದು, supervisory committee ಇರಬಹುದು, ಕೇರಳ ಮತ್ತು ಪಾಂಡಿಚೇರಿ, ತಮಿಳುನಾಡಿನ ಮುಖ್ಯಮಂತ್ರಿಗಳನ್ನು welcome ಮಾಡಿ ಬಿಡಿ. ಅವರನ್ನು ಸ್ಥಳಕ್ಕೆ ಕರೆದುಕೊಂಡು ಹೋಗಿ ತೋರಿಸಿ, ಅವರು ನಮ್ಮನ್ನು 190–200 ಟಿ.ಎಂ.ಸಿ.ನೀರನ್ನು ಕೇಳುತ್ತಾರೋ ಅದು ಮುಖ್ಯವಲ್ಲ. ಇವತ್ತು ಅಕ್ಟೋಬರ್, ಜೂನ್, ಜುಲೈ ತಿಂಗಳುಗಳಲ್ಲಿ allocation ಏನು ಇದೆ, ಅಲ್ಲಿ ಎಷ್ಟು ನೀರು ಇದೆ, ಅಷ್ಟರ ಮೇಲೆ allocation ಮೇಲೆ define ಮಾಡಬೇಕು. ಕೊನೆಪಕ್ಷ ಅದನ್ನು ಕೇಳುವುದಕ್ಕಾದರೂ ನಮಗೆ rights ಇದೆ. ಅವರು totally 250 ಟಿ.ಎಂ.ಸಿ.ನೀರನ್ನು ಕೇಳಲಿ. ಮಳೆ ಬಂದರೆ ನಾವು ಅದನ್ನು ಹಿಡಿದುಕೊಳ್ಳುವುದಕ್ಕೆ ಆಗುವುದಿಲ್ಲ, ಅದು ಓಡಿ ಹೋಗುತ್ತದೆ. ನಾವು ಬೇಕೆಂದರೂ ಅದನ್ನು ಹಿಡಿದು ಇಟ್ಟುಕೊಳ್ಳುವುದಕ್ಕೆ ಆಗುವುದಿಲ್ಲ. ಈ ಬಗ್ಗೆ ಮಾನ್ಯ ಸಿದ್ದರಾಮಯ್ಯನವರ ಗಮನಕ್ಕೆ ತರುವುದೇನೆಂದರೆ, allocation ಬಹಳ ಅವೈಜ್ಞಾನಿಕವಾಗಿರುವುದರಿಂದ ಕಾವೇರಿ ಅಚ್ಚುಕಟ್ಟಿನಲ್ಲಿ 3–4 ಕಟ್ಟೆಗಳು

ಇವೆ. ಅಲ್ಲಿ ನೀರು ಎಷ್ಟು availability ಇದೆ, ಅವರಿಗೆ ಎಷ್ಟು ನೀರನ್ನು ಕೊಡಬಹುದು, ನಮಗೆ ಎಷ್ಟು ನೀರನ್ನು ಇಟ್ಟುಕೊಳ್ಳಬಹುದೆಂಬ ವಿಚಾರದಲ್ಲಿ ಇವತ್ತು ನಮಗೆ ಆಗಿರುವಂಥ ಅನ್ಯಾಯ ಮತ್ತು ಇದರಲ್ಲಿ ಕೇಂದ್ರ ಸರ್ಕಾರ intervene ಆಗದಿದ್ದರೆ ಇಷ್ಟೊಂದು ಅನ್ಯಾಯವಾಗುತ್ತಿರಲಿಲ್ಲವೆಂಬುದು ನೂರಕ್ಕೆ ನೂರರಷ್ಟು ಸತ್ಯ. ಇದರ ಜೊತೆಗೆ ಈ ದೇಶದ ವ್ಯವಸ್ಥೆಯಲ್ಲಿ 100 ಕ್ಕೆ 80% ಕಾಂಗ್ರೆಸ್ ಆಡಳಿತ ಮಾಡಿದೆ, 45–50 ವರ್ಷಗಳು ಮಾಡಿದೆ. ತಾವು ಒಳ್ಳೆಯದನ್ನು ಮಾತ್ರ ಹೇಳಿಕೊಳ್ಳುತ್ತೀರಿ, ಈ ವ್ಯವಸ್ಥೆ ಇಷ್ಟು ಹಾಳಾಗಿರುವುದಕ್ಕೆ ನೀವೂ ಕಾರಣ ಎನ್ನುವುದನ್ನು ಒಪ್ಪುವುದಕ್ಕೆ ಯಾರೂ ರೆಡಿ ಇಲ್ಲವೆಂದರೆ 40–50 ವರ್ಷಗಳು ಕಾಂಗ್ರೆಸ್ ಪಕ್ಷ ಆಡಳಿತ ಮಾಡಿದ್ದು, ಈ ವ್ಯವಸ್ಥೆ ಭ್ರಷ್ಟಾಚಾರ ತಲುಪಿರುವುದಕ್ಕೆ ಆಗಲಿ, ಇವತ್ತು ದರೋಡೆ ಆಗುತ್ತಿರುವುದಕ್ಕೆ ಆಗಲಿ, ಸುಳ್ಳು–ವಂಚನೆ ನಡೆಯುತ್ತಿರುವಂಥದ್ದಕ್ಕಾಗಲಿ, ನಾಲ್ಕು ಒಳ್ಳೆಯ ಕೆಲಸಗಳು ಆಗಿದ್ದರೆ ಆಗಿದೆಯೆಂದು ಹೇಳೋಣ. ಇದೆಲ್ಲಾ ಹೆಚ್ಚಿಗೆ ಆಗಿರುವುದಕ್ಕೆ ಕಾಂಗ್ರೆಸ್ ಪಕ್ಷವೂ ಹೊಣೆ ಎಂದು ಹೇಳಬೇಕಾಗುತ್ತದೆ. ಮಾನ್ಯ ದೇವೇಗೌಡರು 9 ಟಿ.ಎಂ.ಸಿ. ನೀರನ್ನು ಅವತ್ತು ಏನಾದರೂ ಬೆಂಗಳೂರಿಗೆ ಕೊಡದೇ ಇದ್ದಿದ್ದರೆ, ಇವತ್ತು ಕುಡಿಯುವುದಕ್ಕೆ ನೀರು ಇರುತ್ತಿರಲಿಲ್ಲ. ಇವತ್ತು 30 ಟಿ.ಎಂ.ಸಿ. ನೀರು ಬೇಕಾಗಿದೆ, ಇವತ್ತು ಅವರ allocation ಪ್ರಕಾರ ಎಷ್ಟು ಟಿ.ಎಂ.ಸಿ. ನೀರು ಇದೆ? ಇವತ್ತು ಮೇಖ್ರಿ ಸರ್ಕಲ್‌ನಲ್ಲಿ defence ಇದ್ದರೆ, ಅದು ಮಾನ್ಯ ದೇವೇಗೌಡರು ಪ್ರಧಾನ ಮಂತ್ರಿಯಾಗಿದ್ದಾಗ ಆ ಕೆಲಸವಾಗಿದ್ದು. ಇವತ್ತು ಚುನಾವಣೆ ಮಾಡಿದರು, ದೆಹಲಿಗೆ ಹೋಗಿ ಮಾನ್ಯ ದೇವೇಗೌಡರು ಏನು ಎನ್ನುವುದನ್ನು ಕೇಳಿದರೆ ಕಾಂಗ್ರೆಸ್ M.P.ಗಳೇ ಹೇಳುತ್ತಾರೆ. ಮಾನ್ಯ ದೇವೇಗೌಡರು 11 ತಿಂಗಳು ಹೇಗೆ ಕೆಲಸ ಮಾಡಿದರೆಂಬುದನ್ನು ಹೇಳುತ್ತಾರೆ. ಆದರೆ ಇಲ್ಲಿ ಬಹಳ ನೋವು, ಮಾನ್ಯ ದೇವೇಗೌಡರನ್ನು ಪ್ರಧಾನ ಮಂತ್ರಿಯನ್ನಾಗಿ ಕಾಂಗ್ರೆಸ್‌ನವರು ಮಾಡಿದರು ಎಂದು ಹೇಳಿದರು, ನಾನು ಅದೊಂದನ್ನು clarify ಮಾಡುತ್ತೇನೆ. Third frontನವರು ಮಾನ್ಯ ದೇವೇಗೌಡರನ್ನು ಪ್ರಧಾನ ಮಂತ್ರಿಯನ್ನಾಗಿ ಮಾಡಿದ್ದು, ಅವರು ಪ್ರಧಾನಿಯಾದಾಗ ಮಾನ್ಯ ಸಿದ್ದರಾಮಯ್ಯನವರು ಜೊತೆಯಲ್ಲಿದ್ದರು. ಆದರೆ NDAಯನ್ನು ತಪ್ಪಿಸುವುದಕ್ಕೋಸ್ಕರ ಕಾಂಗ್ರೆಸ್‌ನವರು Third front ನವರಿಗೆ

ಸಹಾಯ ಮಾಡಿದರು. ಅವರು ಮಾನ್ಯ ದೇವೇಗೌಡರಿಗೆ ಸಹಾಯ ಮಾಡಲಿಲ್ಲ. Third frontನ ನಾಯಕರುಗಳು ಮಾನ್ಯ ದೇವೇಗೌಡರನ್ನು ಆಯ್ಕೆ ಮಾಡಿದ್ದು, ಕಾಂಗ್ರೆಸ್‌ನವರಲ್ಲ. Third front ಆಯ್ಕೆ ಬಿಟ್ಟು ಬೇರೆಯವರು ಅಧಿಕಾರಕ್ಕೆ ಹೋದರೆ ನಾವು ಜೈಲಿಗೆ ಹೋಗುತ್ತೇವೆಂದು ಕಾಂಗ್ರೆಸ್‌ನವರು ನಾವು ಹೊರಗಡೆಯಿಂದ ಸಹಕಾರ ಕೊಡುತ್ತೇವೆಂದು ಕೊಟ್ಟರು. ಅದನ್ನು ಕಿತ್ತು ಹಾಕಿದ ಕೀರ್ತಿ ಕಾಂಗ್ರೆಸ್‌ನವರಿಗೆ ಬಂತು, ಆದರೆ ಪ್ರಧಾನಿಯನ್ನಾಗಿ ಮಾಡಿದ ಕೀರ್ತಿ ಕಾಂಗ್ರೆಸ್‌ನವರದಲ್ಲ.

(ಗೊಂದಲ)

ಅಧ್ಯಕ್ಷರು : ಆಯಿತು, ಅದನ್ನು ಬಿಡಿ.

ಶ್ರೀ ಎನ್.ಚಲುವರಾಯಸ್ವಾಮಿ : ಮಾನ್ಯ ಅಧ್ಯಕ್ಷರೆ, ಅದನ್ನು ಬಿಟ್ಟೆ, ಈಗ ಕೊನೆಯದಾಗಿ ಶಾಸಕರ ನಿಧಿ ವಿಷಯದಾಗಿ ಹೇಳಿ ಮುಕ್ತಾಯಗೊಳಿಸುತ್ತೇನೆ. ಮಾನ್ಯ ಮುಖ್ಯಮಂತ್ರಿಯವರು ಶಾಸಕರ ನಿಧಿಯನ್ನು 1 ಕೋಟಿ ರೂ.ಗಳಿಂದ 5 ಕೋಟಿ ರೂ.ಗಳಿಗೆ ಹೆಚ್ಚಿಸುವುದು ಸೂಕ್ತವೆಂದು ನನ್ನ ವಿನಂತಿ. ಕ್ಷೇತ್ರಗಳಲ್ಲಿ ಬಹಳ ಸಮಸ್ಯೆಗಳಿವೆ, ಹಳ್ಳಿಗಾಡಿನಲ್ಲಿ ರಸ್ತೆಗಳು, ಕುಡಿಯುವ ನೀರು, ಈ ರೀತಿಯ ಸಮಸ್ಯೆಗಳು ಬಂದಾಗ ಉಪಯೋಗ ಮಾಡುವುದಕ್ಕೆ ಮತ್ತು ಇವತ್ತು ಎಲ್ಲಾ rateಗಳು ಹೆಚ್ಚಾಗಿರುವುದು. ಒಂದು ಕಿ.ಮೀ.ರಸ್ತೆಯನ್ನು ಮಾಡುವುದಕ್ಕೆ 20 ಲಕ್ಷ ರೂ.ಗಳು ಬೇಕಾಗುತ್ತದೆ, ಒಂದು ಕೋಟಿ ರೂ.ಗಳ ಅನುದಾನಗಿಂದ ಏನೂ ಮಾಡುವುದಕ್ಕೆ ಆಗುವುದಿಲ್ಲ. ಆದ್ದರಿಂದ 5 ಕೋಟಿ ರೂ.ಗಳಿಗೆ ಅನುದಾನ ಏರಿಕೆ ಮಾಡಿ MLA grantಅನ್ನು ಮಾಡುವುದು ಮತ್ತು ಇದರ ಜೊತೆಗೆ ಮಾನ್ಯ ಮುಖ್ಯಮಂತ್ರಿಯವರಲ್ಲಿ ಕೇಳಿಕೊಳ್ಳುವುದೇನೆಂದರೆ, MLA grant, MP grantಗೆ ಕಟ್ಟುನಿಟ್ಟಾಗಿ AC inspection, third party inspection ತೆಗೆದು ಹಾಕಬೇಕು. ಒಬ್ಬ Executive Engineerಗೆ ಜವಾಬ್ದಾರಿ ಕೊಡಿ, ಅವನು ತಪ್ಪು ಮಾಡಿದರೆ ಶಿಕ್ಷೆ ಮಾಡಿ, ಅದು ಬಿಟ್ಟು AC inspectionಗೆ ಹೋದರೆ 5%, third party inspectionಗೆ ಹೋದರೆ 5%, ಆದರೆ ಇನ್ನೂ ಸ್ವಲ್ಪ ಲಂಚ ಜಾಸ್ತಿಯಾಗುತ್ತದೆಯೆ ವಿನಾಃ ಇದರಿಂದ ಯಾವುದೇ ಪ್ರಯೋಜನವಾಗುವುದಿಲ್ಲ. ಅದಕ್ಕೆ Executive Engineerಗೆ ಹೇಳಿ, ಅವರು ಜವಾಬ್ದಾರಿಯಿಂದ ಕೆಲಸವನ್ನು ನಿರ್ವಹಿಸದೇ ಇದ್ದರೆ ಅವರ

ಮೇಲೆ ಕ್ರಮ ತೆಗೆದುಕೊಳ್ಳಬೇಕು. ದಯಮಾಡಿ third party inspection ಮತ್ತು AC inspection ಅನ್ನು ತೆಗೆದುಹಾಕಬೇಕು. ಮಾನ್ಯ ಅಧ್ಯಕ್ಷರೆ, ನನಗೆ ಮಾತನಾಡಲು ಅವಕಾಶ ಕೊಟ್ಟದ್ದಕ್ಕೆ ಮತ್ತೊಮ್ಮೆ ಧನ್ಯವಾದಗಳನ್ನು ಹೇಳಿ, ಮಾನ್ಯ ಮುಖ್ಯಮಂತ್ರಿಯವರು ಎಲ್ಲರ ಆಸೆಗಳನ್ನು, ಭರವಸೆಗಳನ್ನು ಈಡೇರಿಸುವಂಥ ರೀತಿಯಲ್ಲಿ ನಾವು ಹೇಳಿದಂಥ ವಿಚಾರಗಳನ್ನು ಗಮನದಲ್ಲಿಟ್ಟುಕೊಂಡು ಮಂಡ್ಯ Sugar Factory ವಿಚಾರದಲ್ಲಿ ದಯಮಾಡಿ ತಾವು ತನಿಖೆಗೆ ಆದೇಶ ಮಾಡಬೇಕೆಂದು ಹೇಳಿ, ಜಿಲ್ಲಾ ಜನತೆಯ ಪರವಾಗಿ ವಿನಂತಿ ಮಾಡಿ, ನಾನು ನನ್ನ ಮಾತನ್ನು ಮುಗಿಸುತ್ತೇನೆ.

5) 1) ಪ್ರಕಟಣೆ

ಅಧ್ಯಕ್ಷರು : ವಿಧಾನ ಪರಿಷತ್ತಿನ ಮಾನ್ಯ ಸಭಾಪತಿಯವರಿಂದ ಬಂದಿರುವ ಸಂದೇಶದಲ್ಲಿ ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆ ನಿಯಮ 118ರ ಮೇರೆಗೆ ವಿಧಾನ ಪರಿಷತ್ತಿನಲ್ಲಿ 2013ನೇ ಸಾಲಿನ ಕರ್ನಾಟಕ ಪೊಲೀಸ್ (ತಿದ್ದುಪಡಿ) ವಿಧೇಯಕವನ್ನು, ದಿನಾಂಕ:11.06.2013ರಂದು ಯಾವ ತಿದ್ದುಪಡಿಗಳಿಲ್ಲದೇ ಅಂಗೀಕರಿಸಲಾಗಿದೆಯೆಂದು ತಿಳಿಸಿರುತ್ತಾರೆ.

2) ಪ್ರಕಟಣೆ

ಅಧ್ಯಕ್ಷರು : ಕಾರ್ಕಳ ವಿಧಾನಸಭಾ ಕ್ಷೇತ್ರದ ಸದಸ್ಯರಾದ ಶ್ರೀ ವಿ.ಸುನೀಲ್‌ಕುಮಾರ್‌ರವರನ್ನು ವಿಧಾನ ಸಭೆಯ ಭಾರತೀಯ ಜನತಾ ಪಕ್ಷದ ಮುಖ್ಯ ಸಚೇತಕರನ್ನಾಗಿ ನೇಮಕ ಮಾಡಲಾಗಿದೆಯೆಂದು ಭಾರತೀಯ ಜನತಾ ಪಕ್ಷದ ಶಾಸಕಾಂಗ ಪಕ್ಷದ ನಾಯಕರಾದ ಶ್ರೀ ಜಗದೀಶ್ ಶೆಟ್ಟರ್‌ರವರು ಪತ್ರದ ಮುಖೇನ ತಿಳಿಸಿರುತ್ತಾರೆಂದು ಈ ಮೂಲಕ ತಿಳಿಸಲಾಗಿದೆ.

6. ಘನತೆವೆತ್ತ ರಾಜ್ಯಪಾಲರ ಭಾಷಣದ ಮೇಲಿನ ವಂದನಾ ನಿರ್ಣಯದ ಮೇಲೆ ಮುಂದುವರೆದ ಚರ್ಚೆ:

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ (ಮೇಲುಕೋಟೆ) : ಮಾನ್ಯ ಅಧ್ಯಕ್ಷರೆ, ನನಗೆ ಮಾತನಾಡಲು ಅವಕಾಶ ಕೊಟ್ಟದ್ದಕ್ಕೆ ತಮಗೆ ಧನ್ಯವಾದಗಳನ್ನು ಹೇಳುತ್ತೇನೆ. ನೂತನ ಸರ್ಕಾರ ಬಂದು ಒಂದು ತಿಂಗಳು ಆಗಿದೆ. ಮಾನ್ಯ